ಡೀಲ್‌ನ ಭಾಗವಾಗಿ, ಶ್ರೀಕಂಠಯ್ಯನವರಿಗೆ ಎರಡು ಬೆಡ್ರೂಮಿನ ಒಂದು ಅಪಾರ್ಟ್‌ಮೆಂಟ್ ಬಿಟ್ಟುಕೊಡುವುದೆಂದೂ, ಕರಾರುಪತ್ರದ ವ್ಯವಹಾರವನ್ನೆಲ್ಲ ಬಿಲ್ಡರೇ ನೋಡಿಕೊಳ್ಳಬೇಕೆಂದೂ ನಿರ್ಧಾರವಾಯಿತು. ಸತೀಶನ ಸಂಭ್ರಮಕ್ಕೆ ಎಣೆಯೇ ಇರಲಿಲ್ಲ. ಈ ನಡುವೆ ಅಪ್ಪ, ಮಗ ಪಾಸ್‌ಪೋರ್ಟ್‌ಗಾಗಿ ಕಚೇರಿಯಿಂದ ಕಚೇರಿಗೆ ಎಡತಾಕಿದರು. ವೀಸಾ ಪಡೆಯಲೆಂದು ಚೆನ್ನೈಗೂ ಹೋಗಿಬಂದರು. ತಂದೆಯನ್ನು ಸಮಾಲೋಚಿಸಿ ಸತೀಶ ಹೊರಡುವ ದಿನವನ್ನು ನಿರ್ಧರಿಸಿ, ಏರ್ ಟಿಕೆಟ್ ಬುಕ್ ಮಾಡಿದ. ಅಪ್ಪನಿಗಾಗಿ ಸತೀಶ ಎರಡು ಹೊಸ ಏರ್‌ಬ್ಯಾಗ್ ತಂದುಕೊಟ್ಟ. 'ನಿಮಗೆ ಅಗತ್ಯವಿದ್ದ ವಸ್ತುಗಳನ್ನು ಪುಟ್ಟ ಬ್ಯಾಗ್‌ನಲ್ಲಿ ಹಾಕಿಟ್ಕೊಳ್ಳಿ, ಅಪ್ಪ! ಸ್ವೆಟರ್ ಇಟ್ಟುಕೊಳ್ಳೋದನ್ನ ಮರೀಬೇಡಿ. ಉಳಿದವನೆಲ್ಲ ದೊಡ್ಡ ಬ್ಯಾಗ್‌ನಲ್ಲಿ ಸೇರಿಸಿ. ಪುಟ್ಟ ಬ್ಯಾಗ್ ನಿಮ್ಮ ಬಳಿಯೇ ಇರಲಿ.' ಎಂದು ಕಾಳಜಿ ತೋರಿದ. ಸಾಮಾನುಗಳನ್ನು ಜೋಡಿಸಲು ಅಪ್ಪನಿಗೆ ನೆರವಾದ.

ಈ ನಡುವೆ ಒಂದು ದಿನ ಸತೀಶ 'ಅಪ್ಪ! ಅಮೆರಿಕದಲ್ಲಿ ನಮ್ಮ ಕರೆನ್ಸಿ ನಡೆಯೋದಿಲ್ಲ. ಅದನ್ನ ಡಾಲರ್‌ಗೆ ಬದಲಾಯಿಸಿಕೋಬೇಕು. ಇಷ್ಟು ದೊಡ್ಡ ಅಮೌಂಟ್‌ನ ಏರೋಪ್ಲೇನ್‌ನಲ್ಲಿ ತೆಗೆದುಕೊಂಡು ಹೋಗೋದು ಸುರಕ್ಷಿತ ಅಲ್ಲ. ಒಂದು ಕೆಲಸ ಮಾಡೋಣ. ನಿಮ್ಮ ಹೆಸರಲ್ಲಿರೋ ಹಣವನ್ನು ಡಾಲರ್‌ಗೆ ಬದಲಾಯಿಸಿ ಅಮೆರಿಕದ ನನ್ನ ಅಕೌಂಟ್‌ಗೆ ಕಳಿಸಿಬಿಡೋಣ. ಅಲ್ಲಿಗೆ ಹೋದಮೇಲೆ ನಿಮ್ಮ ಹೆಸರಿಗೆ ಅಕೌಂಟ್ ತೆಗೆದು ನಿಮಗೆ ಎಷ್ಟು ಬೇಕೋ ಅಷ್ಟು ಹಣವನ್ನ ಟ್ರಾನ್ಸ್‌ಫರ್ ಮಾಡಿದ್ರಾಯ್ತು' ಎಂದ. ಬದುಕನ್ನು ಬಲ್ಲ ಶ್ರೀಕಂಠಯ್ಯ ಗಂಭೀರವಾಗಿ 'ನಿನ್ನ ಬಿಸಿನೆಸ್‌ಗೆ ಎಷ್ಟು ಹಣ ಬೇಕು?' ಎಂದು ಪ್ರಶ್ನಿಸಿದರು.

'ಅದು ಬಿಸಿನೆಸ್, ಅಪ್ಪ! ಅಮೆರಿಕ ಬೇರೆ. ಇಷ್ಟು ಎಂದು ಹೇಗೆ ಹೇಳೋದು? ಕನಿಷ್ಠ ಐದು ಕೋಟಿಯಾದ್ರೂ ಬೇಕಾಗಬಹುದು. ನೀವು ಮೂರು ಕೋಟಿ ಕೊಡಿ. ಉಳಿದ ಹಣವನ್ನು ನಾನೇ ಹೊಂದಿಸಿಕೊಳ್ತೇನೆ.'

'ಇಷ್ಟು ದೊಡ್ಡ ಅಮೌಂಟ್‌ನ ನಮ್ಮ ದೇಶದಲ್ಲೇ ವಿನಿಯೋಗ ಮಾಡಬಹುದಲ್ವಾ? ವಿದೇಶವೇ ಯಾಕೆ ಬೇಕು ಅಂತ?'

'ನನಗೆ ಬೇಕಾದ **Infrastructure** ಇಂಡಿಯದಲ್ಲಿ ಇಲ್ಲ, ಅಪ್ಪ! ಅದು ನಿನಗೆ ಅರ್ಥವಾಗೋದಿಲ್ಲ... ಅಲಕಾ ಕೂಡ ಜಾಬ್ ಮಾಡ್ತಿದಾಳಪ್ಪಾ! ಅವ್ಳಿಗೆ ಅಮೆರಿಕ ಬಿಡೋದು ಇಷ್ಟವಿಲ್ಲ.'

'ಆಯ್ತು. ಆದ್ರೆ, ನನಗೆ ಅಲ್ಲಿ ಹೊಂದಿಕೆ ಆಗದೇ ಹೋದ್ರೆ? ನಾನು ತಿರುಗಿ ಬರಲೇಬೇಕು ತಾನೆ? ಒಂದು ದಿನ ನಾನು ಸಾಯ್ತೀನಿ. ನಮ್ಮ ದೇಶದಲ್ಲಿ ಸಾಯೋದೇ ವಾಸಿ, ಅಲ್ವಾ?'

'ಮತ್ತೆ ಯಾಕೆ ಹಾಗೆ ಹೇಳ್ತೀರಿ, ಅಪ್ಪ! ನಿಮ್ಮನ್ನ ನೋಡಿಕೊಳ್ಳಲಿಕ್ಕೆ ನಾವಿಲ್ವಾ?'

'ಇದೀರಿ. ನೋಡು, ಸತೀಶ್! ನಿನ್ನ ಹೆಸ್ರಿಗೆ ಎರಡು ಕೋಟಿ ಎಪ್ಪತ್ತೈದು ಲಕ್ಷ ಟ್ರಾನ್ಸ್‌ಫರ್ ಮಾಡಬೇಕು ಅಂದ್ಕೊಂಡಿದ್ದೇನೆ. ನಿನಗೆ ಬೇಕಾಗಿರೋ ಬಂಡವಾಳದ ಅರ್ಧಕ್ಕಿಂತ ಹೆಚ್ಚು ಹಣ ನಾನು ಕೊಟ್ಟ ಹಾಗಾಯ್ತು. ಉಳಿದ ಹಣ ನನ್ನಲ್ಲೇ ಇರ್ಲಿ. ಹೇಗೂ, ನನ್ನ ನಂತ್ರ ಆ ಹಣ ನಿನಗೆ ತಾನೇ ಸೇರ್ಬೇಕು? ಬಿಸಿನೆಸ್‌ಗೆ ಬೇಕಾಗಿರೋ ಉಳಿದ ಹಣ ನಿನ್ನ ಹತ್ರ ಇದೆ ಅಂತ ಹೇಳಿದ್ದೆ ನೀನು, ಅಲ್ವಾ?' 'ಅದು ನನ್ನ ಹಕ್ಕಿನ ಹಣ, ಅಪ್ಪ! ನಿಮಗೆ ಪೆನ್ಷನ್ ಇದೆ. ನನಗೇನಿದೆ?' ಅಂದುಕೊಂಡ ಸತೀಶ ಮನಸ್ಸಿನಲ್ಲೇ.

ವಿದೇಶಕ್ಕೆ ಹೊರಡುವ ಎರಡು ದಿನ ಮುನ್ನ ಅಲಕಾ ಮಕ್ಕಳೊಡನೆ ಗಂಡನ ಮನೆಗೆ ಬಂದಳು. ಶ್ರೀಕಂಠಯ್ಯನವರ ಕಾಲಿಗೆರಗಿ, ಮಕ್ಕಳೂ ಎರಗುವಂತೆ ಮಾಡಿದಳು. ಖುಶಿಯಿಂದ ಶ್ರೀಕಂಠಯ್ಯ